ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : 14–2/2008 ದಿನಾಂಕ 11.12.2008ರ ಪತ್ರದಲ್ಲಿ ಇನ್ನೂ ಹೆಚ್ಚುವರಿ 153 ಅಂಗನವಾಡಿ ಕೇಂದ್ರಗಳು ಹಾಗೂ 28 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿರುತ್ತದೆ. ಇದನ್ನು 1.4.2009ರಿಂದ ಪ್ರಾರಂಭಿಸಲಾಗುತ್ತದೆ ಎಂದು ನಾನು ಅವರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸುನಿಲ್ ವಿ.ಹೆಗಡೆ:– ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ಜೋಯಿಡಾ ತಾಲ್ಲೂಕು ಗುಡ್ಡಗಾಡು ಪ್ರದೇಶವಾಗಿದ್ದು, ಇವರೇನು ಒಂದು ಅಂಗನವಾಡಿಗೆ 300 ಜನಸಂಖ್ಯೆ, ಮಿನಿ ಅಂಗನವಾಡಿಗೆ 150 ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡಿದ್ದಾರೆ, ಈ ಆಧಾರದ ಮೇಲೆ ಆ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸದಾಗಲೂ ಸಮಸ್ಯೆ ಉಂಟಾಗುತ್ತಿದ್ದ ಕಾರಣ, ಈ ಬಗ್ಗೆ ಸೂಕ್ತವಾದಂತಹ ಕ್ರಮ ಕೈಗೊಂಡು, ಈಗಾಗಲೇ ಮಂಜೂರಾದಂತಹ 153 ಅಂಗನವಾಡಿ ಕೇಂದ್ರಗಳು ಮತ್ತು 29 ಮಿನಿ ಅಂಗನವಾಡಿ ಕೇಂದ್ರಗಳನ್ನು ಆದಷ್ಟು ಶೀಘ್ರದಲ್ಲಿ ಶೂರು ಮಾಡಬೇಕು. ಏಕೆಂದರೆ, ಈಗಾಗಲೇ ಅಲ್ಲಿ ಬಹಳಷ್ಟು ಜನರಿಗೆ ಸಮಸ್ಯೆಯಾಗಿ, ಪ್ರೈವೇಟ್ ಅಂಗನವಾಡಿ ನಡೆಸಲಾಗುತ್ತಿದೆ. ಸ್ವತಃ ನಾನು ಕೈಯಿಂದ 7–8 ಅಂಗನವಾಡಿಗಳಿಗೆ ಸಂಬಳ ಕೊಟ್ಟು, ಶುರು ಮಾಡಿಸಿದ್ದೇನೆ. ಆದಕಾರಣ, ದಯವಿಟ್ಟು ತಮ್ಮ ಜನಸಂಖ್ಯೆ ಆಧಾರದ ಕ್ರಮವನ್ನು ಸಡಿಲಗೊಳಿಸಿ, ಆದಷ್ಟು ಬೇಗ ಸಾಧ್ಯವಾದಷ್ಟು ಹೆಚ್ಚಿಗೆ ಅಂಗನವಾಡಿಗಳನ್ನು ಅಲ್ಲಿ ತೆರೆಯಲಿಕ್ಕೆ ಪ್ರಯತ್ನಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮತ್ತು ಕೊಳಚೆ ಪ್ರದೇಶದವರಿಗೆ, ಗುಡ್ಡಗಾಡು ಪ್ರದೇಶದವರಿಗೆ 40ಕ್ಕಿಂತ ಹೆಚ್ಚು ಸಂಖ್ಯೆ ಇರತಕ್ಕಂಥ, ವಯಸ್ಸು 6 ವರ್ಷದ ಒಳಗಿನ ಮಕ್ಕಳು ಇರತಕ್ಕಂಥ ಪ್ರದೇಶದಲ್ಲಿ ಅಂಗನವಾಡಿಗೆ ಅವಕಾಶ ನೀಡಲು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ. ಅದರಂತೆ ಕ್ರಮ ವಹಿಸಲಾಗುತ್ತದೆ. ಮಾನ್ಯ ಸದಸ್ಯರ ಹೆಚ್ಚಿನ ಅಂಗನವಾಡಿ ಕೇಂದ್ರಗಳ ಬೇಡಿಕೆಯನ್ನು ನಾವೂ ಪೂರೈಸುತ್ತೇವೆ.

ಇ)ವಿಷಯ:– ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸರಕಾರವು ಸರಬರಾಜು ಮಾಡುತ್ತಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಬೆಳೆಗಳು ಹಾಳಾಗುತ್ತಿದ್ದು, ದಿನಕ್ಕೆ 12 ಗಂಟೆಗಳ ಕಾಳ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

– – –

ಶ್ರೀ ಸುನಿಲ್ ವಿ.ಹೆಗಡೆ [ಹಳಿಯಾಳ] [ಶ್ರೀ ಕೆ.ಪಿ.ಬಚ್ಚೇಗೌಡರ ಪರವಾಗಿ]:– ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸರ್ಕಾರವು

ಸರಬರಾಜು ಮಾಡುತ್ತಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಬೆಳೆಗಳು ಹಾಳಾಗುತ್ತಿದ್ದು, ದಿನಕ್ಕೆ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿಲ್ಲ. ಅವರ ಪರವಾಗಿ ಸರ್ಕಾರದಿಂದ ಯಾರು ಉತ್ತರ ಕೊಡುತ್ತೀರಿ?

ಶ್ರೀ ಹೆಚ್.ಪಿ.ಬಾಲಕೃಷ್ಣ:– ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಇದೊಂದು ಪ್ರಮುಖವಾದಂತಹ ಪ್ರಶ್ನೆಯಾಗಿದೆ.

ಶ್ರೀ ಎಂ.ಟಿ.ಕೃಷ್ಣಪ್ಪ:– ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಳ್ಳಿಗಳಲ್ಲಿ ನಾಟಕವಾಡುವಾಗ, ಮಾತು ಮರೆತು ಹೋದಾಗ, ಪಕ್ಕದಲ್ಲೇ ನಿಂತು ಎಳೆದಾಡುತ್ತಿರುತ್ತಾರೆ. ನಮ್ಮ ಸರ್ಕಾರ reply ಮಾಡುವುದು ಆ ರೀತಿಯಾಗಿದೆ.

ಶ್ರೀ ಕೆ.ಸುರೇಶ್‌ಕುಮಾರ್ [ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] [ಮಾನ್ಯ ಇಂಧನ ಸಚಿವರ ಪರವಾಗಿ]:– ಮಾನ್ಯ ಉಪಾಧ್ಯಕ್ಷರೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡ ಕೆ.ಪಿ. ರವರು ನಿಯಮ 73 ರಡಿಯಲ್ಲಿ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಅತೀ ಹಿಂದುಳಿದ ಜಿಲ್ಲೆಯಾಗಿದ್ದು, ಇಲ್ಲಿನ ರೈತರು ಕೃಷಿಗೆ ಅಂತರ್ ಜಲವನ್ನೇ ನಂಬಿ ವ್ಯವಸಾಯ ಮಾಡುತ್ತಿದ್ದಾರೆ. ಈಗ ಸರ್ಕಾರವು ಪೂರೈಸುತ್ತಿರುವ ಅಸಮರ್ಪಕ ವಿದ್ಯುತ್ ಸರಬರಾಜಿನಿಂದ ರೈತರ ಪಂಪುಸೆಟ್ಟುಗಳು ಸರಿಯಾಗಿ ಕೆಲಸ ಮಾಡದೆ ರೈತರು ಬೆಳೆದ ಬೆಳೆಗಳೆಲ್ಲ ಒಣಗಿ ಹೋಗುತ್ತಿದ್ದು, ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ, ಚಿಕ್ಕಬಳ್ಳಾಪುರ್ ಜಿಲ್ಲೆಗೆ ದಿನಕ್ಕೆ ಕನಿಷ್ಟ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವವಿದ್ದು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಲಭ್ಯವಾಗುತ್ತಿರುವ ವಿದ್ಯುತ್ ಪ್ರಮಾಣ ಬೇಡಿಕೆ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ. ಆದಕಾರಣ, ಸರ್ಕಾರದ ಆದೇಶದನ್ವಯ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಚಿಕ್ಕಬಳ್ಳಾಪುರ ಜಿಲ್ಲೆಯು ಸೇರಿದಂತೆ ತನ್ನ ವ್ಯಾಪ್ತಿಯಲ್ಲಿನ ಗ್ರಾಮಾಂತರ ಪ್ರದೇಶಗಳಿಗೆ ಪ್ರತಿ ದಿನ 6 ಗಂಟೆಗಳ ಕಾಲಾ 3 ಫೇಸ್ ವಿದ್ಯುತ್ತನ್ನು ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ತನ್ನು ನಿಗದಿತ ಅವಧಿಯಲ್ಲಿ ಸರಬರಾಜು ಮಾಡಲಾಗುತ್ತಿದೆ. ರಾಜ್ಯದಲ್ಲಿನ ವಿದ್ಯುತ್ ಪರಿಸ್ಥಿತಿಯಲ್ಲಿ ಸುಧಾರಣೆ ಆಗುವವರೆಗೂ ವಿದ್ಯುತ್ ಸರಬರಾಜಿನ ಕಾಲಾವಧಿಯನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ವಿದ್ಯುತ್ ಪರಿಸ್ಥಿತಿಯು ಸುಧಾರಿಸದ ನಂತರ, ಚಿಕ್ಕಬಳ್ಳಾಪುರ ಜಿಲ್ಲೆಯೂ ಸೇರಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮೀಣ ಪ್ರದೇಶಗಳಿಗೂ ಸಮರ್ಪಕ ವಿದ್ಯುತ್ ಸರಬರಾಜು ಮಾಡಲಾಗುವುದು.

ಶ್ರೀ ಸುನೀಲ್ ವಿ.ಹೆಗಡೆ[ಶ್ರೀ ಕೆ.ಪಿ. ಬಚ್ಚೇಗೌಡ ಅವರ ಪರವಾಗಿ]: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬೋರ್ ವೆಲ್‌ಗಳಲ್ಲಿ ನೀರು ನೂರಾರು ಫೂಟ್ ಕೆಳಗೆ ಹೋಗಿದ್ದು, ಒಂದು ಬೋರ್ ನಿಂದ 800 ರಿಂದ 1500 ಗ್ಯಾಲನ್ ಮಾತ್ರ ನೀರು ಸಿಗುತ್ತಿದೆ. ಹೀಗಿರುವಾಗ ಹನಿ ನೀರಾವರಿಯಿಂದ ಬೆಳೆಯುವ ಬೆಳೆಗಳಿಗೆ ವಿದ್ಯುತ್ ಕೊಡಬೇಕಾದರೆ, ಅವರ ಸ್ಲ್ಯಾಬ್ ಮಾಡಬೇಕಾಗುತ್ತದೆ. ಕೆಲವೊಂದು ಏರಿಯಾಗೆ 1-2 ಗಂಟೆ ಬಿಟ್ಟು ಮತ್ತೆ ಕೆಲವೊಂದು ಏರಿಯಾಗೆ 2 ಗಂಟೆ ಬಿಡಬೇಕಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಅಲ್ಲಿ ಅತಿ ಹಿಂದುಳಿದ ಕ್ಷೇತ್ರವೆಂದು ಸಚಿವರೆ ಹೇಳುತ್ತಿದ್ದಾರೆ. ಆ ಕಾರಣದಿಂದ ಅಲ್ಲಿ 6 ಗಂಟೆ ವಿದ್ಯುತ್ ಪೂರೈಕೆ ಮಾಡಿದರೆ ಸಾಧ್ಯವಾಗುವುದಿಲ್ಲ. ಕಾರ್ಖಾನೆಗಳಿಗೆ ವಿದ್ಯುತ್ ಅನ್ನು ಕಡಿತಗೊಳಿಸಿ ರೈತರಿಗೆ ಈ ಮೇ 15ರವೆಗೆ 12 ಗಂಟೆಗಳು ವಿದ್ಯುತ್ ಕೊಡುವ ವ್ಯವಸ್ಥೆಯಾಗಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್[ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]: ಈಗಾಗಲೇ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಸುಧಾರಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ವಿಷಯ: ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯಹೆದ್ದಾರಿ 3ರಲ್ಲಿ ಹಾಗೂ 94ರಲ್ಲಿ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳುವ ಬಗ್ಗೆ.

\- - -

ಶ್ರೀ ಹೆಚ್.ಸಿ.ಬಾಲಕೃಷ್ಣ(ಮಾಗಡಿ):- ಸನ್ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ 3 ರಲ್ಲಿ ಮಾಗಡಿಯಿಂದ ಗುಡೇಮಾರನಹಳ್ಳಿ ಕೈಮಾರ್ಗದವರೆಗೆ ಹಾಗೂ ರಾಜ್ಯ ಹೆದ್ದಾರಿ -94 ರಲ್ಲಿ ಕಲ್ಯಾ-ಶ್ರೀಪತಿಹಳ್ಳಿ ಸಾತನೂರುವರೆಗೆ ವಾಹನಗಳು ಚಲಿಸಲು ಸಾಧ್ಯವಿಲ್ಲದಷ್ಟು ರಸ್ತೆಗಳು ಹದಗೆಟ್ಟಿದ್ದು ಹಾಗೂ ಇದಕ್ಕೆ ಸಂಬಂಧಪಟ್ಟ ಸಚಿವರು ಖುದ್ದಾಗಿ ಈ ರಸ್ತೆಗಲ ದುಸ್ಥಿತಿಯನ್ನು ಅವಗಾನಿಸಿ ದುರಸ್ಥಿಪಡಿಸುವ ಭರವಸೆ ನೀಡಿದ್ದರೂ ಸಹ, ಈ ರಸ್ತೆಗಳ ದುರಸ್ತಿಗೆ ಯಾವುದೇ ಕ್ರಮಗಳನ್ನು ಜರುಗಿಸಿರುವುದಿಲ್ಲದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):- 1. ಹುಣಸನಹಳ್ಳಿ-ಚಿಕ್ಕಹಳ್ಳಿ ರಸ್ತೆ (ತಮಿಳುನಾಡು ಗಡಿಯಿಂದ ಆಂಧ್ರಗಡಿ ಸೇರುವ ರಸ್ತೆ) ರಾಜ್ಯಹೆದ್ದಾರಿ 3: ಸದರಿ ರಸ್ತೆಯು ಮಾಗಡಿ ತಾಲ್ಲೂಕಿನಲ್ಲಿ ಸರಪಳಿ 82.67 ರಿಂದ 120.50 ರವರೆಗೆ ಹಾದು ಹೋಗುತ್ತಿದ್ದು ಒಟ್ಟು 37.83 ಕಿಮೀ ಉದ್ದವಿರುತ್ತದೆ. ಸದರಿ ರಸ್ತೆಯ ಮಾಗಡಿಯಿಂದ ಗುಡೇಮಾರನಹಳ್ಳಿ ಭಾಗವು (ಸರಪಳಿ 93.50 ರಿಂದ 107.50) 14 ಕಿಮೀ ಉದ್ದವಿದ್ದು ಸದರಿ ಭಾಗದಲ್ಲಿ ಅಧಿಕ ವಾಹನ ಸಂಚಾರದಿಂದ **(PCU**